# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:ಪುತ್ತೂರು ವಿಭಾಗ

**KARNATAKA STATE ROAD TRANSPORT CORPORATION**

ವಿಭಾಗೀಯ ಕಛೇರಿ, ಮುಕ್ರುಂಪಾಡಿ, ಪುತ್ತೂರು. -574 202.
Divisional Office, Mukrumpadi, PUTTUR -574 202

ಸಂ:ಕರಾಸ:ಪುವಿ:ಸಂ:ವಾ/2096/17-18 ದಿನಾಂಕ:27-09-2017

**ಇ- ಟೆಂಡರ್ ಪ್ರಕಟಣೆ ಸಂ: 05: 2017:**

ಕ.ರಾ.ರ.ಸಾ.ನಿಗಮದ ಪುತ್ತೂರು ವಿಭಾಗದ ಬಿ.ಸಿ.ರೋಡ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಬಸ್ಸು ನಿಲ್ದಾಣದಲ್ಲಿನ ಈ ಕೆಳಕಂಡ ವಾಣಿಜ್ಯ ಮಳಿಗೆಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪರವಾನಗಿದಾರರನ್ನು ಆಯ್ಕೆ ಮಾಡಲು ಟೆಂಡರ್ ಕರೆಯಲಾಗಿದೆ. ಟೆಂಡರ್‌ನಲ್ಲಿ ಸೂಚಿಸಿದ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಪ್ರತೀ ವರುಷ ಶೇ.10ರ ಹೆಚ್ಚಳದೊಂದಿಗೆ ಶಾಶ್ವತ ಮಳಿಗೆಗಳಿಗೆ 05 ವರುಷದ ಅವಧಿಗೆ ಹಾಗೂ ತೆರೆದ ಮಳಿಗೆಗೆ 03 ವರುಷದ ಅವಧಿಗೆ ಪರವಾನಿಗೆ ನೀಡಲು ಉದ್ದೇಶಿಸಲಾಗಿದೆ.

| ಕ್ರ ಸಂ | ಬಸ್ಸು ನಿಲ್ದಾಣದ ಹೆಸರು | ವಾಣಿಜ್ಯ ಮಳಿಗೆಯ ವಿವರ/ವ್ಯವಹಾರ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ ರೂ. ಗಳಲ್ಲಿ | ಮಳಿಗೆಯ ಮಾದರಿ | ಪರವಾನಗಿ ಅವಧಿ (ವರ್ಷ ಗಳಲ್ಲಿ) | ಇಎಂಡಿ ಹಣ ರೂ. ಗಳಲ್ಲಿ | ಅರ್ಜಿ ಶುಲ್ಕ ರೂಗಳಲ್ಲಿ (+ ಜಿಎಸ್‌ಟಿ) | ವಿಸ್ತೀರ್ಣ ಚದರ ಅಡಿಗಳಲ್ಲಿ | ಮೀಸಲಾತಿ |
|---|---|---|---|---|---|---|---|---|---|
| 01 | ಬಿ.ಸಿ.ರೋಡ್ | ಜನರಲ್ ಸ್ಟಾಲ್ ನಂ.1 (SCD-102/C1) | 6910 | ಶಾಶ್ವತ | ಐದು | 20730 | 118 | 155 | ಸಾಮಾನ್ಯ |
| 02 | ಬಿ.ಸಿ.ರೋಡ್ | ಜನರಲ್ ಸ್ಟಾಲ್ ನಂ.2 (SCD-103/C1) | 6910 | ಶಾಶ್ವತ | ಐದು | 20730 | 118 | 155 | ಪ.ಜಾತಿ |
| 03 | ಬಿ.ಸಿ.ರೋಡ್ | ಜನರಲ್ ಸ್ಟಾಲ್ ನಂ.3 (SCD-104/C1) | 6910 | ಶಾಶ್ವತ | ಐದು | 20730 | 118 | 155 | ಪ.ಪಂಗಡ |
| 04 | ಬಿ.ಸಿ.ರೋಡ್ | ಜನರಲ್ ಸ್ಟಾಲ್ ನಂ.4 (SCD-105/C1) | 6910 | ಶಾಶ್ವತ | ಐದು | 20730 | 118 | 155 | ವಿಕಲಚೇತನ |
| 05 | ಬಿ.ಸಿ.ರೋಡ್ | ಉಪಹಾರ ಗೃಹ ನಂ.5 (ಸಸ್ಯಾಹಾರಿ) (SCD-106/C1) | 47715 | ಶಾಶ್ವತ | ಐದು | 143145 | 563 | 1073 | ಸಾಮಾನ್ಯ |
| 06 | ಬಿ.ಸಿ.ರೋಡ್ | ಐಷಾರಾಮಿ ಉಪಹಾರ ಗೃಹ (ಸಸ್ಯಾಹಾರಿ/ಮಾಂಸಾಹಾರಿ) (SCD-107/C1) | 92500 | ಶಾಶ್ವತ | ಹತ್ತು | 277500 | 1092 | 3839 | ಸಾಮಾನ್ಯ |
| 07 | ಬಿ.ಸಿ.ರೋಡ್ | ಸೂಪರ್ ಮಾರ್ಕೆಟ್/ಕಛೇರಿ ಉದ್ದೇಶಕ್ಕಾಗಿ (SCD-108/C1) | 70360 | ಶಾಶ್ವತ | ಹತ್ತು | 211080 | 831 | 2921 | ಸಾಮಾನ್ಯ |
| 08 | ಬಿ.ಸಿ.ರೋಡ್ | ದ್ವಿಚಕ್ರ ವಾಹನ ತಂಗುದಾಣ (SCD-109/C1) | 48855 | ತೆರೆದ ಸ್ಥಳ | ಮೂರು | 146565 | 577 | 7231 | ಸಾಮಾನ್ಯ |

ಮೇಲ್ಕಂಡ ಮಳಿಗೆಗಳಲ್ಲಿ ಕ್ರಸಂ.01 ರಿಂದ 05 ನೆಲ ಅಂತಸ್ತಿನಲ್ಲಿ ಕ್ರಸಂ.06 & 07 ಮೊದಲನೇ ಅಂತಸ್ತಿನಲ್ಲಿ ಹಾಗು ಕ್ರಸಂ.08 ಬೇಸ್‌ಮೆಂಟ್ ಅಂತಸ್ತಿನಲ್ಲಿರುತ್ತದೆ. ಬಸ್ ನಿಲ್ದಾಣದ ಕಾಮಗಾರಿ ಪ್ರಕ್ರಿಯೆ ಮುಕ್ತಾಯವಾದ ನಂತರ ಮಳಿಗೆಗಳನ್ನು ಆಯ್ಕೆಯಾದ ಪರವಾನಿಗೆದಾರರಿಗೆ ನೀಡಲಾಗುವುದು. ಇ-ಟೆಂಡರ್ ದಸ್ತಾವೇಜುಗಳನ್ನು/ ನಿಬಂಧನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ದಿನಾಂಕ:**28-09-2017**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಇ-ಟೆಂಡರ್ ಅರ್ಜಿ ಸಲ್ಲಿಕೆಗೆ ದಿನಾಂಕ:**23-10-2017**ರ ಸಮಯ 16:00 ಘಂಟೆಯ ವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿರುತ್ತದೆ. ಇ-ಟೆಂಡರ್ ತೆರೆಯುವ ದಿನಾಂಕ:**25-10-2017 ಸಮಯ 12.30**ಗಂಟೆಗೆ (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ).

ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ನೊಂದಾಯಿತ ಅಧಿಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಅವಧಿ ಮುಗಿದ ನಂತರ ಹೊಸದಾಗಿ ಟೆಂಡರ್ ಪ್ರಕಟಣೆ ಹೊರಡಿಸಲಾಗುವುದು. ಮೇಲ್ಕಂಡ ಮಳಿಗೆಗಳಿಗೆ ಇ-ಟೆಂಡರ್‌ನಲ್ಲಿ ಭಾಗವಹಿಸುವ ಅರ್ಜಿದಾರರು, ತಮ್ಮ ಲಿಖಿತ ಮನವಿಯೊಂದಿಗೆ ಸೂಚಿಸಿರುವ ಮಳಿಗೆಗೆ ನಿಗಧಿಪಡಿಸಿರುವ ಅರ್ಜಿ ಶುಲ್ಕ ಮತ್ತು ಇ.ಎಂ.ಡಿ., ಮೊತ್ತಕ್ಕೆ ಪ್ರತ್ಯೇಕ ಡಿ.ಡಿ.ಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಪುತ್ತೂರು ವಿಭಾಗರವರ ಹೆಸರಿಗೆ ಪಡೆದು ದಿನಾಂಕ: **23-10-2017**ರಂದು 15.00ಗಂಟೆಯೊಳಗಾಗಿ ಕಛೇರಿ ಅವಧಿಯಲ್ಲಿ ಸಲ್ಲಿಸುವುದು. ತಡವಾಗಿ ಬಂದ ಮನವಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಅರ್ಜಿ ಶುಲ್ಕ ಮತ್ತು ಇ.ಎಂ.ಡಿ., ಡಿ.ಡಿ.ಯನ್ನು ಹಾಗೂ ಟೆಂಡರ್ ನಿಂಬಧನೆಗಳಲ್ಲಿ ತಿಳಿಸಿರುವಂತೆ ಇನ್ನಿತರ ದಾಖಲಾತಿಗಳನ್ನು ನಿಗಧಿತ ದಿ:**23-10-2017**ರ ಒಳಗಾಗಿ ಸಲ್ಲಿಸದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಪುತ್ತೂರು ವಿಭಾಗ, ಮುಕ್ರುಂಪಾಡಿ, ಪುತ್ತೂರು ವಿಭಾಗದ ದೂರವಾಣಿ ಸಂಖ್ಯೆ7760990972/7760990982 ನ್ನು ಕಛೇರಿ ವೇಳೆ(ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30ರವರೆಗೆ)ಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

**ಇ-ಟೆಂಡರ್ ಪ್ರಕಟಣೆಯಲ್ಲಿ ಅರ್ಜಿಗಳನ್ನು ಪುರಸ್ಕರಿಸುವ/ತಿರಸ್ಕರಿಸುವ/ಮಾರ್ಪಾಡು ಮಾಡುವ/ರದ್ದುಪಡಿಸುವ ಅಧಿಕಾರವನ್ನು ನಿಗಮವು ಕಾಯ್ದಿರಿಸಿಕೊಂಡಿದೆ.**

ವಿಭಾಗೀಯ ನಿಯಂತ್ರಣಾಧಿಕಾರಿ,
ಕರಾರಸಾನಿಗಮ ಪುತ್ತೂರು ವಿಭಾಗ

Scanned by CamScanner